## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 518 |
| ಸದಸ್ಯರ ಹೆಸರು | : | ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 19-07-2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಡಿಯಲ್ಲಿ ಬರುವ ಅಂಗನವಾಡಿಗಳನ್ನು ಉನ್ನತೀಕರಿಸುವ ಯೋಜನೆ ಸರ್ಕಾರದ ಮುಂದಿದೆಯೇ; ಈಗಾಗಲೇ ಹಲವು ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸುತ್ತಿದ್ದು; ಅಂಗನವಾಡಿ ಕಾರ್ಯಕರ್ತರಿಗೆ ಸೇವಾ ಭದ್ರತೆ ಕಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಹೌದು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಡಿಯಲ್ಲಿ ಬರುವ ಅಂಗನವಾಡಿಗಳನ್ನು ಉನ್ನತೀಕರಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುತ್ತದೆ.<br>ಈಗಾಗಲೇ ಹಲವು ಸರ್ಕಾರಿ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿರುವ ಕಾರಣ ಅಂಗನವಾಡಿ ಕಾರ್ಯಕರ್ತೆಯರಿಗೆ ಯಾವುದೇ ರೀತಿಯ ಸೇವಾ ಅಭದ್ರತೆ ಇರುವುದಿಲ್ಲ. |
| ಆ. | ಅಂಗನವಾಡಿ ಕೇಂದ್ರದ ಹತ್ತಿರದ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವುದರಿಂದ ಅಂಗನವಾಡಿಗಳು ಕ್ರಮೇಣವಾಗಿ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವ ಸಂಭವವಿದ್ದು, ಈ ಕುರಿತು ಸರ್ಕಾರದ ನಿಲುವೇನು; ಅಂಗನವಾಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್ಚು ವಿದ್ಯಾರ್ಹತೆ ಹೊಂದಿದ ಅಂಗನವಾಡಿ ಕಾರ್ಯಕರ್ತರನ್ನು ಆಯಾಯ ಪ್ರದೇಶದ ಶಾಲೆಗಳ ಪೂರ್ವ ಪ್ರಾಥಮಿಕ ತರಗತಿಗಳಿಗೆ ಬೋಧಿಸಲು ನೇಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ವಿವರ ನೀಡುವುದು) | ಅಂಗನವಾಡಿ ಕೇಂದ್ರದ ಹತ್ತಿರದ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸುವುದರಿಂದ ಅಂಗನವಾಡಿಗಳು ಪ್ರಾಮುಖ್ಯತೆ ಕಳೆದುಕೊಳ್ಳುವುದಿಲ್ಲ. ಅಂಗನವಾಡಿ ಕೇಂದ್ರವು ಸಮುದಾಯ ಆಧಾರಿತ ಕಾರ್ಯಕ್ರಮವಾಗಿದ್ದು, ಹಾಲಿ ನಿರ್ವಹಿಸುತ್ತಿರುವ ಎಲ್ಲಾ ಸೇವೆಗಳು ನಿರಂತರವಾಗಿ ಮುಂದುವರೆಯುತ್ತವೆ.<br>ಅಂಗನವಾಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹೆಚ್ಚು ವಿದ್ಯಾರ್ಹತೆ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರನ್ನು ಇಲಾಖಾ ವತಿಯಿಂದ ಪ್ರಾಯೋಗಿಕವಾಗಿ ಪ್ರಾರಂಭಿಸಲಾಗುವ LKG/UKG ಗಳಲ್ಲಿ ಬೋಧಿಸಲು ಬೋಧನಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುವ ಬಗ್ಗೆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿ ಹೊಂದಿದ ಅಂಗನವಾಡಿ ಕಾರ್ಯಕರ್ತೆಯರ ವಿವರ ಕುರಿತಂತೆ ಪರಿಶೀಲಿಸಲಾಗುತ್ತಿದೆ. |
| ಇ. | ಅಂಗನವಾಡಿಗೆ ಬರುವ ಮಕ್ಕಳಿಗೆ ತರಕಾರಿ ಖರೀಧಿಸಲು ಹಣವನ್ನು ನೀಡದಿರಲು ಕಾರಣವೇನು; ಹಾಗೂ ಗರ್ಭಿಣಿ ಬಾಣಂತಿಯರಿಗೆ ನೀಡುವ ಪೌಷ್ಠಿಕ ಆಹಾರದ ತರಕಾರಿ ವೆಚ್ಚವನ್ನು ಕಡಿಮೆ ಮಾಡಲು ಕಾರಣವೇನು; (ವಿವರ ನೀಡುವುದು) | ಮಾತೃಪೂರ್ಣ ಯೋಜನೆಯಡಿ ರಾಜ್ಯ ಸರ್ಕಾರದ ಉಪ ಕ್ರಮದಂತೆ ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.11.50 ಗಳಂತೆ ಹೆಚ್ಚುವರಿಯಾಗಿ ಒದಗಿಸುತ್ತಿದ್ದು, ಸದರಿ ಮೊತ್ತದಲ್ಲಿ ರೂ. 6.00 ರಂತೆ ಮೊಟ್ಟೆ, ರೂ. 4.70 ರಂತೆ ಹಾಲಿನ ಪುಡಿ ಮತ್ತು ರೂ. 20 ಪೈಸೆಯಂತೆ ಸಕ್ಕರೆ ವೆಚ್ಚ ಭರಿಸುತ್ತಿದ್ದು, ನಿಗದಿಪಡಿಸಿದ ಘಟಕ ವೆಚ್ಚದ ಮಿತಿಯಲ್ಲಿ ಪೂರಕ ಪೌಷ್ಟಿಕ ಆಹಾರ ನಿರ್ವಹಿಸಬೇಕಾದ ಕಾರಣ ಉಳಿದ 60 ಪೈಸೆಯಲ್ಲಿ ತರಕಾರಿ ಖರೀದಿಯನ್ನು ನಿರ್ವಹಿಸಲಾಗುತ್ತಿದೆ. |

| | | |
|---|---|---|
| | | ಅಂಗನವಾಡಿ ಕೇಂದ್ರದ ಮಕ್ಕಳ ಪೂರಕ ಪೌಷ್ಠಿಕ ಆಹಾರಕ್ಕಾಗಿ ಪ್ರತಿ ದಿನದ ಘಟಕ ವೆಚ್ಚ ರೂ.8.00ಗಳನ್ನು ನಿಗಧಿಪಡಿಸಿರುವ ಕಾರಣ ನಿಗಧಿತ ಘಟಕ ವೆಚ್ಚವನ್ನು ಭರಿಸಲು ಸಾಧ್ಯವಿರುವುದಿಲ್ಲ. |
| ಈ. | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಅಧಿಕಾರಿ ಸಿಬ್ಬಂದಿಗಳಿಗೆ ಕಾರ್ಯಕರ್ತರಿಗೆ ನೀಡಬೇಕಾದ ವೇತನ/ ಗೌರವಧನವನ್ನು ಕ್ರಿಯಾ ಯೋಜನೆ ಹಾಗೂ ಇತರ ಲೆಕ್ಕಶೀರ್ಷಿಕೆಯಲ್ಲಿ ಮೀಸಲಿಟ್ಟು ಅನುದಾನ ಬಿಡುಗಡೆ/ ಕ್ರಿಯಾ ಯೋಜನೆ ಅನುಮೋದನೆ ಇತ್ಯಾದಿ ತಡವಾಗಿ ವೇತನ ಪಾವತಿ ತಡವಾಗುತ್ತಿರುವ ಬಗ್ಗೆ ಸರ್ಕಾರದ ಪರಿಹಾರ ಕ್ರಮಗಳೇನು; (ವಿವರ ನೀಡುವುದು) | 2024-25ನೇ ಸಾಲಿಗೆ 204 ಶಿಶು ಅಭಿವೃದ್ಧಿ ಯೋಜನಾ ಕಛೇರಿಗಳಡಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳು ಹಾಗೂ ಅಂಗನವಾಡಿ ಕಾರ್ಯಕರ್ತೆ ಮತ್ತು ಅಂಗನವಾಡಿ ಸಹಾಯಕಿಯರ ವೇತನ/ಗೌರವಧನದ ಉದ್ದೇಶಕ್ಕಾಗಿ ಕ್ರಿಯಾಯೋಜನೆಯಲ್ಲಿ ನಿಗಧಿಪಡಿಸಿದಂತೆ ತ್ರೈಮಾಸಿಕವಾರು ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಖಜಾನೆ -2 ತಂತ್ರಾಂಶದಲ್ಲಿ ತಾಂತ್ರಿಕ ದೋಷಗಳ ಕಾರಣಗಳಿಗಾಗಿ ಅನುದಾನ ಪಾವತಿಯ ಹಂತದಲ್ಲಿ ತಡವಾಗಿರುವ ಕುರಿತು ಗಮನಕ್ಕೆ ಬಂದಿದ್ದು ಈ ನಿಟ್ಟಿನಲ್ಲಿ ತಂತ್ರಾಂಶದ ಸಮಸ್ಯೆಗಳನ್ನು ಪರಿಹರಿಸಲು ನಿಗಧಿತ ಸಮಯದಲ್ಲಿ ಸೂಕ್ತ ಕ್ರಮ ವಹಿಸಲಾಗಿರುತ್ತದೆ. |
| ಉ. | ಅಂಗನವಾಡಿ ಮತ್ತು ಸಹಾಯಕಿಯರು ಮತ್ತು ಕಾರ್ಯಕರ್ತರ ಸಮಸ್ಯೆಗಳ ಕುರಿತು ಸರ್ಕಾರ ಗಮನಹರಿಸಿದೆಯೇ; ಸರ್ಕಾರದ ವಿವಿಧ ಯೋಜನೆಗಳನ್ನು ಮತ್ತು ಅವುಗಳ ಮಾಹಿತಿಯನ್ನು ಹಾಗೂ ಸಾರ್ವಜನಿಕರಿಗೆ ತಲುಪಿಸುವ ಕಾರ್ಯಕರ್ತರಿಗೆ ಪ್ರೋತ್ಸಾಹ ಧನ ನೀಡಲು ಸರ್ಕಾರ ಬಯಸಿದೆಯೇ? | ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಸಮಸ್ಯೆಗಳ ಕುಂದುಕೊರತೆಗಳ ಜಿಲ್ಲಾ ಮತ್ತು ರಾಜ್ಯಮಟ್ಟದ ಸಭೆಯಲ್ಲಿ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲಾಗಿದೆ. ವಿವರ ಅನುಬಂಧ-1ರಲ್ಲಿ ಒದಗಿಸಲಾಗಿದೆ.<br><br>ಸರ್ಕಾರದ ವಿವಿಧ ಯೋಜನೆಗಳ ಮಾಹಿತಿಯನ್ನು ಸಾರ್ವಜನಿಕರಿಗೆ ತಲುಪಿಸುವ ಸಲುವಾಗಿ ಅಂಗನವಾಡಿ ಕಾರ್ಯಕರ್ತೆಯರಿಗೆ ಈ ಕೆಳಕಂಡಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. |

| ಕ್ರ.ಸಂ | ಯೋಜನೆ | ಪ್ರೋತ್ಸಾಹ ಧನ |
|---|---|---|
| 01 | ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆ | ರೂ.250/- (ಪ್ರತಿ ಅರ್ಜಿಗೆ) |
| 02 | ಭಾಗ್ಯಲಕ್ಷ್ಮೀ ಯೋಜನೆ | ರೂ.300/- (ವಾರ್ಷಿಕ ) |
| 03 | ಮಿಷನ್ ಶಕ್ತಿ ಯೋಜನೆ | ರೂ.250/- (ಪ್ರತಿ ಅರ್ಜಿಗೆ) |

**ಸಂಖ್ಯೆ: ಮಮಇ 141 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

## ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಸಮಸ್ಯೆಗಳು ಮತ್ತು ಸರ್ಕಾರ ಈ ಕುರಿತು ತೆಗೆದುಕೊಂಡಿರುವ ಕ್ರಮದ ವಿವರ

### ಅನುಬಂಧ-1

| ಕ್ರ. ಸಂ. | ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಸಮಸ್ಯೆಗಳು | ಸರ್ಕಾರದ ಕ್ರಮದ ವಿವರ |
|---|---|---|
| 1 | ಹಳೆಯ ಮಾರ್ಗಸೂಚಿಯಂತೆ SSLC ಪಾಸಾದ ಸಹಾಯಕಿ ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಮುಂಬಡ್ತಿ ನೀಡಬೇಕು. | ಸದರಿ ಬೇಡಿಕೆಯಂತೆ ರಾಜ್ಯ ಸರ್ಕಾರವು ದಿನಾಂಕ: 31/01/2023 ರಂದು ತಿದ್ದುಪಡಿ ಆದೇಶವನ್ನು ಹೊರಡಿಸಿದೆ. |
| 2 | ಅಂಗನವಾಡಿ ಕೇಂದ್ರಗಳ ವೇಳಾಪಟ್ಟಿ ಬದಲಾಗಬೇಕು. | ಅಂಗನವಾಡಿ ಕೇಂದ್ರಗಳ ಅವಧಿಯು ಬೆಳಿಗ್ಗೆ 9.30 ರಿಂದ ಸಂಜೆ 4.00 ಗಂಟೆಯವರೆಗೆ ಇರುತ್ತದೆ, ಇದರಲ್ಲಿ ಸರ್ಕಾರದ ಆದೇಶ ದಿನಾಂಕ: 30.01.2023ರ ಪ್ರಕಾರ ಶಾಲಾಪೂರ್ವ ಶಿಕ್ಷಣವನ್ನು ಬೆಳಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆಯವರೆಗೆ ನಿಗದಿಪಡಿಸಿದ್ದು, ಸಾರ್ವಜನಿಕರು ಮಧ್ಯಾಹ್ನ 2.00 ಗಂಟೆಯ ನಂತರ ಮಾತ್ರ ಅಂಗನವಡಿ ಕೇಂದ್ರಗಳಿಗೆ ಭೇಟಿ ನೀಡಲು ಸೂಚಿಸಲಾಗಿರುತ್ತದೆ. |
| 3 | ಬೆಂಗಳೂರು ನಗರ ಜಿಲ್ಲೆಯಲ್ಲಿ ಅಂಗನವಾಡಿಗಳಲ್ಲಿ ಸಿಬ್ಬಂದಿ ಕೊರತೆ ಇದ್ದು ಆಫ್ಲೈನ್ ಮೂಲಕ ನೇಮಕಾತಿ ಮಾಡಲು ಕೂಡಲೇ ಅನುಮತಿ ನೀಡಬೇಕು | ನಿರ್ದೇಶನಾಲಯದ ಸಂಖ್ಯೆ; ಮಮ ಅಇ:ಐಸಿಡಿ:ANG-01/2023-24 ದಿನಾಂಕ:02.02.2024 ಮತ್ತು 17.02.2024 ರ ಪತ್ರಗಳಲ್ಲಿ ಆಡಳಿತಾತ್ಮಕ ಹಿತದೃಷ್ಟಿಯಿಂದ ಬೆಂಗಳೂರು ನಗರ ಜಿಲ್ಲೆಯಲ್ಲಿ ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಹುದ್ದೆಗಳ ಭರ್ತಿಗಾಗಿ ಆಫ್ ಲೈನ್ ಮುಖಾಂತರ ಹುದ್ದೆಗಳ ಭರ್ತಿಗಾಗಿ ಅಧಿಸೂಚನೆ ಹೊರಡಿಸಿ, ಭೌತಿಕವಾಗಿ ಪ್ರಾರಂಭಿಸಿದ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ವಿಶೇಷ ಪ್ರಕರಣವೆಂದು ಪರಿಗಣಿಸಿ ಒಂದು ಬಾರಿಗೆ ಮಾತ್ರ ಅನ್ವಯವಾಗುವಂತೆ ಅನುಮತಿ ನೀಡಲಾಗಿದೆ. |
| 4 | ಗ್ರಾಚ್ಯುಟಿ ಪಾವತಿಸಲು ಕೂಡಲೇ ಸರ್ಕಾರ ನಿರ್ದೇಶನ ನೀಡಬೇಕು. | ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಹಾಗೂ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ ಉಪಧನ(Gratuity) ಪಾವತಿಸುವ ಕುರಿತು ಸರ್ಕಾರದ ಆದೇಶ ದಿನಾಂಕ: 04/02/2023 ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.<br>ಈ ಕುರಿತಂತೆ ದಿನಾಂಕ:21.06.2024 ರಂದು ಪ್ರತ್ಯೇಕ ಮಾರ್ಗಸೂಚಿ ಹೊರಡಿಸಲಾಗಿದೆ. |
| 5 | ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ಏಕಕಾಲದಲ್ಲಿ ವಯೋನಿವೃತ್ತಿ ನೀಡುವುದು. | ದಿನಾಂಕ:21.05.2024 ರ ಸರ್ಕಾರದ ಆದೇಶದಲ್ಲಿ ಮೇ ಮಾಹೆಯಿಂದ ಅಕ್ಟೋಬರ್ ಮಾಹೆಯಲ್ಲಿ ನಿವೃತ್ತಿ ಹೊಂದಲಿರುವ ಅಂಕಾಕ/ಅಂ.ಸ ರವರನ್ನು ಅಕ್ಟೋಬರ್ ಮಾಹೆಯಲ್ಲಿ ನಿವೃತ್ತಿಗೊಳಿಸಲು ಹಾಗೂ ನವೆಂಬರ್ ಮಾಹೆಯಿಂದ ಏಪ್ರಿಲ್ ಮಾಹೆಯಲ್ಲಿ ನಿವೃತ್ತಿ ಹೊಂದುವವರನ್ನು ಏಪ್ರಿಲ್ ಮಾಹೆಯಲ್ಲಿ ನಿವೃತ್ತಿಗೊಳಿಸಲು ಆದೇಶಿಸಲಾಗಿದೆ. |

| ಕ್ರ. ಸಂ. | ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರ ಸಮಸ್ಯೆಗಳು | ಸರ್ಕಾರದ ಕ್ರಮದ ವಿವರ |
|---|---|---|
| 6 | ಯೋಜನೇತರ ಕೆಲಸಗಳಾದ ಸ್ತ್ರೀಶಕ್ತಿ, ಭಾಗ್ಯಲಕ್ಷ್ಮಿ, ಮಾತೃವಂದನಾ ಮತ್ತು ಚುನಾವಣೆ ಕರ್ತವ್ಯ, ಮುಂತಾದವುಗಳನ್ನು ಅಂಗನವಾಡಿ ಕಾರ್ಯಕರ್ತೆ / ಸಹಾಯಕಿ ನಿರ್ವಹಿಸುವುದನ್ನು ನಿಲ್ಲಿಸಬೇಕು. | ಈಗಾಗಲೇ ಜಿಲ್ಲಾಧಿಕಾರಿಗಳಿಗೆ ಯೋಜನೇತರ ಕೆಲಸಗಳನ್ನು ವಹಿಸಬಾರದೆಂದು ತಿಳಿಸಿ ದಿನಾಂಕ-20.10.2018 ಮತ್ತು 17.03.2022 ರಂದು ಪತ್ರ ಬರೆಯಲಾಗಿದೆ.<br><br>ಮುಂದುವರೆದು ದಿನಾಂಕ: 23.02.2023ರಂದು ಸಮಗ್ರ ಶಿಶು ಅಭಿವೃದ್ಧಿ ಯೋಜನೇತರ ಕೆಲಸಗಳಿಗೆ ನಿಯೋಜಿಸದಿರುವ ಕುರಿತು ಸಹ ಜಿಲ್ಲಾಧಿಕಾರಿಗಳಿಗೆ ಅ.ಸ. ಪತ್ರ ಹೊರಡಿಸಲಾಗಿದೆ. |
| 7 | ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಬೇಕು ಅಥವಾ ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ, ಕಾರ್ಯಕರ್ತೆಯರಷ್ಟೇ ಗೌರವಧನ ನೀಡಬೇಕು | ಸರ್ಕಾರದ ಆದೇಶದ ಸಂಖ್ಯೆ: ಮಮಇ 241 ಐಸಿಡಿ 2022 ದಿನಾಂಕ:23.03.2023ರ ಆದೇಶದಲ್ಲಿ 1002 ಮಿನಿ ಅಂಗನವಾಡಿ ಕೇಂದ್ರಗಳನ್ನು ಮುಖ್ಯ ಅಂಗನವಾಡಿ ಕೇಂದ್ರಗಳಾಗಿ ಉನ್ನತೀಕರಿಸಲಾಗಿದೆ. ಉಳಿದ ಅಂಗನವಾಡಿ ಕೇಂದ್ರಗಳನ್ನು ಉನ್ನತೀಕರಿಸುವ ಹಂತ ಪ್ರಗತಿಯಲ್ಲಿದೆ. |
| 8 | ಅನುಕಂಪದ ಆಧಾರದ ನೇಮಕಾತಿ ಸಂಬಂಧ ಬೇಡಿಕೆ | ಸರ್ಕಾರದ ಆದೇಶ ಸಂಖ್ಯೆ: ಮಮಇ 190 ಐಸಿಡಿ 2021 ದಿನಾಂಕ: 05.03.2022ರಲ್ಲಿ ಸೂಚಿಸಿರುವಂತೆ ಅಂಗನವಾಡಿ ಕಾರ್ಯಕರ್ತೆ / ಸಹಾಯಕಿಯರು ಮೃತಪಟ್ಟಲ್ಲಿ ಮಗಳು / ಸೊಸೆಗೆ ಅನುಕಂಪದ ಆಧಾರದ ಆಯ್ಕೆಗೆ ಅವಕಾಶ ಕಲ್ಪಿಸಲಾಗಿದೆ. |